
Read India
An imprint of Pratham Books

# ರಿತುವಿನ ಪತ್ರ ಉದ್ದ ಬೆಳೆದದ್ದು!

ಮಾಲಾ ಕುಮಾರ್
ಹೆನು



Original Story *(English)*
Ritu's Letter Gets Longer! by Mala Kumar
© Pratham Books, 2010

First Kannada Edition: 2010
Kannada Translation: Bageshree

Illustrations: Henu

ISBN: XXXXXXXXXX

Registered Office:
PRATHAM BOOKS
633-634, 4th "C" Main, 6th 'B' Cross, OMBR Layout,
Banaswadi, Bangalore 560 043
✆ +91 80 25420925

Regional Office:
New Delhi ✆ +91 11 41042483

Typesetting and Layout by:
Athena Productions

Printed by :
XXXXXXXXXXXXX

Published by :
Pratham Books
www.prathambooks.org

Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc

**The development and production of this book has been supported by Sheila Gulati**

# ರಿತುವಿನ ಪತ್ರ ಉದ್ದ ಬೆಳೆದದ್ದು!

ಕಥೆ
ಮಾಲಾ ಕುಮಾರ್

ಚಿತ್ರಗಳು
ಹೆನು

ಕನ್ನಡ ಅನುವಾದ
ಬಾಗೇಶ್ರೀ

ತಾತ ಪತ್ರ ಬರೀತಾ ಇದ್ದರು.

ರಿತು ಕುರ್ಚಿಗೆ ಒರಗಿ ತಾತನ ಪಕ್ಕ ನಿಂತಿದ್ದಳು.

"ಮಣಿಯನ್ನು ರಜಕ್ಕೆ ನಮ್ಮನೆಗೆ ಕಳಿಸಿ ಅಂತ ಆಂಟಿಗೆ ಬರೆದಿದ್ದೀಯಾ ತಾತ?" ಅಂತ ರಿತು ಕೇಳಿದಳು.



"ಬರೆದಿದ್ದೇನೆ. ನಿನಗೆ ಪತ್ರ ಓದಿ ಹೇಳುತ್ತೀನಿ ಕೇಳು".

"ಪ್ರೀತಿಯ ಪೂಜಾ, ಹೇಗಿದ್ದೀಯ? ಎಲ್ಲಾ ಕುಶಲವೆಂದು ನಂಬಿದ್ದೇನೆ. ಮಣಿಗೆ ಈಗ ರಜ ಇರಬೇಕಲ್ಲವಾ? ರಿತುವಿಗೆ ಅವನ ಜೊತೆ ಆಡುವ ಆಸೆ. ರಜದಲ್ಲಿಮಣಿಯನ್ನು ತುಮಕೂರಿಗೆ ಕಳಿಸಿಕೊಡು."



ರಿತು ಕುಣಿದು ಕುಪ್ಪಳಿಸಿದಳು. ಖುಷಿ ತಡೆದುಕೊಳ್ಳಲಾರದೆ ರೂಮಿನ ತುಂಬ ಓಡಿ ತಾತನನ್ನು ಅಪ್ಪಿಕೊಂಡಳು.

"ಈ ಪತ್ರವನ್ನು ನೀನೇ ಪೋಸ್ಟ್ ಡಬ್ಬಕ್ಕೆ ಹಾಕುತ್ತೀಯಾ?" ಅಂತ ತಾತ ಕೇಳಿದರು.

"ಒಬ್ಬಳೇ ಹೋಗಿ ಹಾಕಲಾ? ನಿಜವಾಗಿಯೂ?!" ಅಂದಳು ರಿತು.





"ಹೌದು ರಿತು ಮರಿ. ನೋಡು, ಇಲ್ಲಿ ವಿಳಾಸ ಬರೆದಿದ್ದೀನಿ. ಇದನ್ನು ಪೋಸ್ಟ್ ಆಫೀಸಿಗೆ ತೆಗೆದುಕೊಂಡು ಹೋಗಿ ರಮೇಶ್ ಮಾಮನಿಗೆ ಕೊಡು. ರಮೇಶ್ ಮಾಮ ಗೊತ್ತಲ್ಲವಾ ನಿನಗೆ? ದಪ್ಪ ಮೀಸೆಯ, ಎತ್ತರದ ಮಾಮ?" ಅಂತ ಕೇಳಿದರು ತಾತ.

"ಗೊತ್ತು. ರಮೇಶ್ ಮಾಮನೇ ಮಣಿಗೆ ಹೋದ ಬೇಸಿಗೆ ರಜೆಯಲ್ಲಿ ಸೈಕಲ್ ಹೊಡೆಯಲಿಕ್ಕೆ ಕಲಿಸಿದ್ದು. ಅವರೇ ಪತ್ರ ತಗೊಂಡು ಹೋಗಿ ಪೂಜಾ ಅಂಟಿಗೆ ಕೊಡ್ತಾರಾ?"

"ಇಲ್ಲ. ಆದರೆ ಈ ಪತ್ರ ಖಂಡಿತ ನಿನ್ನ ಆಂಟಿಗೆ ತಲುಪುತ್ತದೆ. ಯೋಚನೆ




ರಿತು ತನ್ನ ಗುಲಾಬಿ ಬಣ್ಣದ ಬ್ಯಾಗು ತೆಗೆದುಕೊಂಡು ಹೊರಟಳು. ಒಳಗೆ ಪತ್ರ ಮತ್ತು ಅದರ ಜೊತೆಗೆ ಒಂದು ಪೆನ್ಸಿಲ್ಲು ಇತ್ತು. ದೊಡ್ಡ ಕಾರ್ಯಕ್ಕೆ ಹೊರಟ ದೊಡ್ಡ ಹುಡುಗಿಯಂತೆ ಅನ್ನಿಸುತ್ತಿತ್ತು. ಸ್ವಲ್ಪ ಹೆದರಿಕೆಯೂ ಆಗುತ್ತಿತ್ತು. ನಾಯಿ ಬಗೀರಾ ಅವಳನ್ನು ಅಟ್ಟಿಸಿಕೊಂಡು ಬಂದುಬಿಟ್ಟರೆ?

ಆದರೆ ರಿತುವಿಗೆ ತಾನೇ ಪತ್ರ ಪೋಸ್ಟ್ ಮಾಡಲಿಕ್ಕೆ ಹೊರಟ ಬಗ್ಗೆ ತುಂಬಾ ಹೆಮ್ಮೆ. ಹೊರಟಳು... ನಾಲಕ್ಕು ಬಿಲ್ಡಿಂಗ್‌ಗಳ ಆಚೆ ಇದ್ದ ಪೋಸ್ಟ್ ಆಫೀಸಿಗೆ!







ಸ್ವಲ್ಪ ಮುಂದೆ ಹೋದ ಮೇಲೆ ರಿತು ನಿಂತು ಪತ್ರ ಬ್ಯಾಗಿನಿಂದ ಹೊರಗೆ ತೆಗೆದು ನೋಡಿದಳು. ತಾತನ ಅಕ್ಷರ ಓದುವುದು ಕಷ್ಟ. ಅವರು ಓದಿ ಹೇಳಿದ್ದನ್ನು ನೆನಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದಳು. ತುಮಕೂರು ಅನ್ನುವ ಪದದ ಮುಂದೆ "ಪಿಲೀಸ್" ಅನ್ನುವ ಪದಗಳನ್ನು ಪೆನ್ಸಿಲ್ಲಿನಲ್ಲಿ ಬರೆದು ಸೇರಿಸಿ ಮುಂದೆ ನಡೆದಳು.



ಮುಂದಿನ ಬಿಲ್ಡಿಂಗಿನ ಮುಂದೆ ಮತ್ತೆ ನಿಂತು ಪತ್ರವನ್ನು ಇನ್ನೊಮ್ಮೆ ಹೊರಗೆ ತೆಗೆದಳು. ಪೂಜ ಆಂಟಿಗೆ ಅವಳಿಗೆ ಮಣಿಯ ಜೊತೆ ಆಟ ಆಡಲಿಕ್ಕೆ ಎಷ್ಟು ಆಸೆ ಅಂತ ಅರ್ಥ ಆಗದಿದ್ದರೆ? ಪೆನ್ಸಿಲ್ಲಿನಲ್ಲಿ ಮತ್ತೆ "ಪಿಲೀೀೀೀಸ್" ಅಂತ ಬರೆದಳು.








ರಿತು ಪೋಸ್ಟ್ ಆಫೀಸ್ ತಲುಪಿದಳು. ಅಲ್ಲಿ ಕೆಂಪು ಪೋಸ್ಟ್ ಡಬ್ಬಿ ಇತ್ತು.




ಆದರೆ ರಿತು ಕಾಲ ತುದಿಯಲ್ಲಿ
ನಿಂತರೂ ಪತ್ರ ಒಳಗೆ ಹಾಕುವ ಡಬ್ಬಿಯ
ಕಂಡಿ ಅವಳ ಕೈಗೆ ಎಟಕುತ್ತಿರಲಿಲ್ಲ.

ಧೈರ್ಯದಿಂದ ರಮೇಶ್ ಮಾಮನ ಹತ್ತಿರ ಹೋಗಿ ಅವರಿಗೆ ಪತ್ರ ಕೊಟ್ಟಳು. ಅವರು ನಗುತ್ತಾ ಪತ್ರ ತೆಗೆದುಕೊಂಡರು.


"ಜಾಣೆ! ಇನ್ನು ಮನೆಗೆ ಓಡು. ನಾನು ಪತ್ರವನ್ನು ನಿನ್ನ ಆಂಟಿಗೆ ತಲುಪಿಸುತ್ತೇನೆ."

ರಿತು ತಕ್ಷಣ ಹೊರಡಲಿಲ್ಲ. ರಮೇಶ್ ಮಾಮ ಪೆನ್ನಿನಲ್ಲಿ ಪತ್ರದ ಮೇಲೆ ಏನನ್ನೋ ಬರೆದು ನಂತರ ಎಲ್ಲಾ ಪತ್ರಗಳ ಮೇಲೆ ಸೀಲು ಗುದ್ದುತ್ತಿದ್ದ ಪೋಸ್ಟ್ ಮ್ಯಾನ್‌ಗೆ ಕೊಟ್ಟದ್ದನ್ನು ನೋಡಿದಳು.




ಧಂ ಧಂ ಧಂ ಅಂತ ಒಂದೇ ಸಮನೆ ಪೋಸ್ಟ್ ಮ್ಯಾನ್ ಸೀಲು ಗುದ್ದುತ್ತಿದ್ದ. ರಿತುವಿನ ಪತ್ರ ಕೈಗೆ ಬಂದಾಗ ಒಂದು ಗಳಿಗೆ ಗುದ್ದುವುದನ್ನು ನಿಲ್ಲಿಸಿ ನಕ್ಕು ತನ್ನ ಕಿವಿಯ ಹಿಂದೆ ಸಿಕ್ಕಿಸಿಕೊಂಡಿದ್ದ ಪೆನ್ಸಿಲ್ಲನ್ನು ತೆಗೆದು ಏನೋ ಬರೆದ.





ಐದು ದಿನ ಕಳೆಯಿತು. ಪೋಸ್ಟ್ ಮ್ಯಾನ್ ತಾತನಿಗೆ ಒಂದು ಪತ್ರ ತಂದ. ನಗುತ್ತಾ, "ನಿನ್ನ ಆಂಟಿ ಮಣಿಯನ್ನು ನಾಡಿದ್ದು ಕಳಿಸ್ತೀನಿ ಅಂತ ಬರೆದಿದ್ದಾಳೆ. ಓದಿ ಹೇಳ್ತೀನಿ ಕೇಳು" ಅಂದರು ತಾತ.






"ನಿಮ್ಮ ಪತ್ರಕ್ಕೆ ನಾನು 'ಪಿಲೀಸ್' ಅಂತ ಒಂದು ಪದ ಸೇರಿಸಿದ್ದೆ!" ಅಂದಳು ರಿತು.

"ನಿನ್ನ ಪತ್ರದಲ್ಲಿ 'ಪ್ಲೀಸ್' ಅಂತ ಇಪ್ಪತ್ತು ಸಲ ಇತ್ತಂತೆ!"





ತಾನು ಬರೆದ ಒಂದು
'ಪಿಲೀಸ್' ಮತ್ತು ಇನ್ನೊಂದು
'ಪಿಲೀeeeeeಸ್' ಇಪ್ಪತ್ತು ಆದದ್ದು
ಹೇಗೆ ಅಂತ ರಿತುವಿಗೆ ಗೊತ್ತಿಲ್ಲ.
ಒಟ್ಟಿನಲ್ಲಿ ಮಣಿ ಬರುತ್ತಾನಲ್ಲ
ಅಂತ ರಿತುಗೆ ಖುಷಿಯೋ


PLeeese
pleece
PLEASE
PLIS
pleej
pleece
PLEASE
pleej
PLIS
pleece
PLEASE
PLEASE
PLeeese



ನಮಸ್ತೆ. ನನ್ನ ಹೆಸರು ಶ್ರೇಯ. ನನಗೆ ಕೇರಮ್ ಆಟ ತುಂಬ ಇಷ್ಟ. ಪುಸ್ತಕ ಓದುವುದೂ ಇಷ್ಟ. ನನಗೆ ಕಷ್ಟಪಟ್ಟು ಓದಿ ಡಾಕ್ಟರ್ ಆಗಬೇಕು ಅಂತ ಆಸೆ. ಈ ಪುಸ್ತಕ ಕೊಂಡದ್ದಕ್ಕೆ ಧನ್ಯವಾದಗಳು. ನೀವು ಈ ಪುಸ್ತಕ ಕೊಂಡಿದ್ದರಿಂದಾಗಿ ನಾನು ಮತ್ತು ನನ್ನ ಸ್ನೇಹಿತರು ಬಹಳಷ್ಟು ಪುಸ್ತಕಗಳನ್ನು ನಮ್ಮ ಲೈಬ್ರರಿಯಲ್ಲಿ ಓದಲು ಸಾಧ್ಯ.

ತಾನು ಬರೆದ ಒಂದು ಪಿಲೀಸ್' ಮತ್ತು ಇನ್ನೊಂದು ಪಿಲೀeeeeeಸ್' ಇಪ್ಪತ್ತು ಆದದ್ದು ಹೇಗೆ ಅಂತ ರಿತುವಿಗೆ ಗೊತ್ತಿಲ್ಲ. ಒಟ್ಟಿನಲ್ಲಿ ಮಣಿ ಬರುತ್ತಾನಲ್ಲ ಅಂತ ರಿತುಗೆ ಖುಷಿಯೋ ಖುಷಿ.

ಹೆನುವಿಗೆ ಮಕ್ಕಳಿಗಾಗಿ ಚಿತ್ರಗಳನ್ನು ರಚಿಸುವುದು ಇಷ್ಟ. "ಚೆಂದದ ಚಿತ್ರಗಳಿರುವ ಪುಸ್ತಕಗಳು ಮಕ್ಕಳ ಸೌಂದರ್ಯ ಪ್ರಜ್ಞೆಯನ್ನು ರೂಪಿಸುತ್ತವೆ ಮತ್ತು ಬುದ್ಧಿ ವಿಕಸನಕ್ಕೆ ಸಹಾಯ ಮಾಡುತ್ತವೆ" ಅನ್ನುತ್ತಾರೆ ಹೆನು.



**ಪುಟ್ಟ ರಿತುವಿಗೆ ತನ್ನ ಆಂಟಿಯ ಮಗನ ಜೊತೆಗೆ ಆಡುತ್ತಾ ರಜ ಕಳೆಯುವ ಆಸೆ. ಈ ಸಂದೇಶ ಇರುವ ಒಂದು ವಿಶೇಷ ಪತ್ರವನ್ನು ಅವಳು ಆಂಟಿಯ ಊರಿಗೆ ಪೋಸ್ಟ್ ಮಾಡುತ್ತಾಳೆ.**




ನಮ್ಮ ಎಲ್ಲಾ ಪ್ರಕಟಣೆಗಳ ಕುರಿತು ಮಾಹಿತಿಗಾಗಿ ದಯಮಾಡಿ ಭೇಟಿ

ನಮ್ಮ ಪ್ರಕಟಣೆಗಳು ಇಂಗ್ಲೀಷ್, ಹಿಂದಿ, ಕನ್ನಡ, ತಮಿಳು, ತೆಲುಗು, ಮರಾಠಿ, ಗುಜರಾತಿ, ಬೆಂಗಾಲಿ, ಪಂಜಾಬಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲಿ

**PRATHAM BOOKS**

**ಪ್ರಥಮ್ ಬುಕ್ಸ್** – ಭಾರತೀಯ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಹಾಗೂ ಕೈಗೆಟುಕುವ ದರದಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಲಾಭೋದ್ದೇಶರಹಿತ ಸಂಸ್ಥೆ.

Age Group: 3-6 years
Rituvina Pathra Uddha Beledaddhu (Kannada)
MRP: Rs. XXXXX